# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಕಾ.ಪಾ.ಅ/ದಾ.ವಿ/ಕಾ./ಪಿ.ಆರ್/ /12-13.
(SWM-03)

ಕಾರ್ಯಪಾಲಕ ಅಭಿಯಂತರರು ರವರ ಕಛೇರಿ
ದಾಸರಹಳ್ಳಿ ವಿಭಾಗ, ದಾಸರಹಳ್ಳಿ ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು. ದಿನಾಂಕ: 14/12/12

## "ಕಾರ್ಯಾದೇಶ ಪತ್ರ"

ವಿಷಯ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ದಾಸರಹಳ್ಳಿ ವಲಯ ವ್ಯಾಪ್ತಿಯ ಪ್ಯಾಕೇಜ್ D4. (ವಾರ್ಡ್ ಸಂಖ್ಯೆ: 70 ಮತ್ತು 71 ಕ್ಕೆ) ಆಹ್ವಾನಿಸಿರುವ ಘನತ್ಯಾಜ್ಯ ನಿರ್ವಹಣೆಗೆ ಕಾರ್ಯಾದೇಶ ನೀಡುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಪತ್ರ ಸಂಖ್ಯೆ: ನಅಇ 745 ಎಂಎನ್‌ವೈ 12 ದಿನಾಂಕ:18-09-2012
2. ಮಾನ್ಯ ಅಯುಕ್ತರ ಆದೇಶ ಪತ್ರದ ಸಂಖ್ಯೆ:ಅಯುಕ್ತರು/ಪಿ .ಎಸ್.ಆರ್/(4)6544/2012-13 ದಿನಾಂಕ:18-09-2012
3. ರಾಜ್ಯ ಟೆಂಡರ್ ಬುಲೆಟಿನ್ ಪತ್ರದ ಸಂಖ್ಯೆ:UDD/748/MNY/2012, ದಿನಾಂಕ: 21-09-2012
4. ಟೆಂಡರ್ ಅಧಿಸೂಚನೆ ಸಂಖ್ಯೆ: BBMP/EE/DD/E-PMT-T-04/2012-13/D4 ದಿನಾಂಕ:- 18-09-2012.
5. ಪತ್ರಿಕೆ ಪ್ರಕಟಣೆ ದಿನಾಂಕ: 19-09-2012
6. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ತೀರ್ಮಾನದ ಅಧಿಕ ವಿಷಯದ ಸಂಖ್ಯೆ 04(282)/2012-2013, ದಿನಾಂಕ:30.10.2012
7. ಈ ಕಛೇರಿಯ ಒಪ್ಪಿಗೆ ಪತ್ರದ ಸಂಖ್ಯೆ: EE/DD/LOA/PR/390/2012-13 ದಿನಾಂಕ: 02.11.2012.
8. ವಿಜಯ ಬ್ಯಾಂಕ್, ಗಾಂಧಿ ಬಜಾರ್ ಶಾಖೆ, ಬೆಂಗಳೂರು ರವರು ದಿನಾಂಕ:28.11.2012 ರಂತೆ ನೀಡಿರುವ ಕಾರ್ಯಾಧಾರಿತ ಭದ್ರತಾ ಠೇವಣಿ ರೂ.6,72,000.00 ಗಳಿಗೆ ದಿನಾಂಕ:27.03.2016 ರವರೆಗೆ ಚಾಲನೆಯಲ್ಲಿರುವಂತೆ
9. ಸರ್ಕಾರದ ಆದೇಶ ಸಂಖ್ಯೆ: ನಅಇ 793 ಎಂಎನ್‌ವೈ 12 ದಿನಾಂಕ:21-11-2012
10. ಘನತ್ಯಾಜ್ಯ ನಿರ್ವಹಣೆಯ ಸಂಬಂಧ ದಿನಾಂಕ.14.12.2012 ರಿಂದ ಜಾರಿಗೆ ಬರುವಂತೆ ಮಾಡಿಕೊಂಡಿರುವ ಒಡಂಬಡಿಕೆ ಪತ್ರ ಸಂಖ್ಯೆ: BBMP/EE/DD/SWM/AGG-03/2012-13.

**********

ಮೇಲ್ಕಂಡ ವಿಷಯ ಮತ್ತು ಉಲ್ಲೇಖಗಳ ರೀತ್ಯಾ, ಗುತ್ತಿಗೆ ಷರತ್ತು ಮತ್ತು ನಿಬಂಧನೆಗಳಂತೆ ಘನತ್ಯಾಜ್ಯ ನಿರ್ವಹಣೆ (ಸಂಗ್ರಹಣೆ ಮತ್ತು ಸಾಗಣೆ) ಮಾಡಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ದಾಸರಹಳ್ಳಿ ವಲಯ ವ್ಯಾಪ್ತಿಯ ಪ್ಯಾಕೇಜ್ ಸಂಖ್ಯೆ: D4ಕ್ಕೆ ರಾಜಗೋಪಾಲನಗರ ಮತ್ತು ಹೆಗ್ಗನಹಳ್ಳಿ ವಾರ್ಡ್‌ನ ಹೆಗ್ಗನಹಳ್ಳಿ ಉಪ ವಿಭಾಗದಲ್ಲಿ ತಮ್ಮ ಗುತ್ತಿಗೆಯು ಅಂಗೀಕೃತವಾಗಿರುತ್ತದೆ. ತಾವು ನೀಡಿರುವ ಕಾರ್ಯಯೋಜನೆಯಂತೆ ಪ್ರತಿ ದಿನ ಘನತ್ಯಾಜ್ಯ ನಿರ್ವಹಣೆ ಕಾರ್ಯನಿರ್ವಹಿಸಲು ಮಾಸಿಕ ಗುತ್ತಿಗೆ ಮೊತ್ತ ರೂ.27,68,022/-- ರಂತೆ (ರೂ.ಇಪ್ಪತ್ತೇಳು ಲಕ್ಷ ಅರವತ್ತೆಂಟು ಸಾವಿರದ ಇಪ್ಪತ್ತೆರಡು ರೂಪಾಯಿಗಳು) ತಮಗೆ ದಿನಾಂಕ: 21.12.2012 ರಿಂದ ಜಾರಿಗೆ ಬರುವಂತೆ ಕಾರ್ಯಾದೇಶ ನೀಡಲಾಗಿದೆ. ಸದರಿ ಕಾರ್ಯಾದೇಶವು ದಿನಾಂಕ: 21.12.2012 ರಿಂದ ದಿನಾಂಕ:20.12.2015 ರವರೆಗೆ ಚಾಲ್ತಿಯಲ್ಲಿರುತ್ತದೆ.

**ಕಾರ್ಯಯೋಜನೆಯಂತೆ ಒದಗಿಸಬೇಕಾದ ಸಿಬ್ಬಂದಿ, ವಾಹನ ಮತ್ತು ಸಲಕರಣೆಗಳು**

| ಕ್ರ.ಸಂ. | ಸಿಬ್ಬಂದಿ, ವಾಹನ ಮತ್ತು ಸಲಕರಣೆಗಳ ವಿವರಗಳು | ಒದಗಿಸಬೇಕಾಗಿರುವ ಸಂಖ್ಯೆ |
|---|---|---|
| 1 | ಕಾರ್ಮಿಕರು | 141 |
| 2 | ಮೇಲ್ವಿಚಾರಕರು | 07 |
| 3 | ತಳ್ಳುವ ಗಾಡಿ | 46 |
| 4 | ಆಟೋಟಿಪ್ಪರ್ | 19 |
| 5 | ಟಿಪ್ಪರ್ ಲಾರಿ | 02 |
| 6 | ಕಾಂಪ್ಯಾಕ್ಟರ್ | 03 |
| 7 | ಕಾರ್ಮಿಕರ ಸಮವಸ್ತ್ರ ಮತ್ತು ಭದ್ರತಾ, ಸ್ವಚ್ಛತಾ ನಿರ್ವಹಣೆ ಸಲಕರಣೆಗಳು | ಅವಶ್ಯಕತೆ ಇದ್ದಷ್ಟು |

4

ಗುತ್ತಿಗೆದಾರರು 1ನೇ ಮಾಹೆಯ ಕೆಲಸಕ್ಕೆ ಬಿಲ್ ಸಲ್ಲಿಸುವ ಸಮಯದಲ್ಲಿ ಎಲ್ಲಾ ಕಾರ್ಮಿಕರಿಗೆ ಮಾಸಿಕ ವೇತನವನ್ನು ಚೆಕ್/ಇ.ಸಿ.ಎಸ್/ನೇರವಾಗಿ ಬ್ಯಾಂಕ್ ಖಾತೆಗೆ ಪಾವತಿಸಿರುವ ಬಗ್ಗೆ, ಇ.ಎಸ್.ಐ ಮತ್ತು ಪಿ.ಎಫ್ ನೊಂದಣಿ ಮಾಡಿಸಿರುವ ಹಾಗೂ ವಂತಿಕೆ ಪಾವತಿಸಿರುವ ಚಲನ್‌ನ ನಕಲು ಪ್ರತಿಯನ್ನು ಒದಗಿಸುವುದು ಹಾಗೂ ಇದೇ ಕ್ರಮವನ್ನು ಪ್ರತಿ ತಿಂಗಳು ಅನುಸರಿಸಲು ಸೂಚಿಸಲಾಗಿದೆ. ಹಾಗೂ ಗುತ್ತಿಗೆದಾರರು ಪ್ರತಿ ದಿನ ಸಂಬಂಧಪಟ್ಟ ಅಧಿಕಾರಿಗಳಿಗೆ ಘನತ್ಯಾಜ್ಯ ನಿರ್ವಹಣೆಯ ಬಗ್ಗೆ ಪ್ರಗತಿ ವರದಿಯನ್ನು ಸಲ್ಲಿಸಲು ಸೂಚಿಸಿದೆ.

ಈ ಕಾರ್ಯಾದೇಶವು ಗುತ್ತಿಗೆ ಕರಾರು ಷರತ್ತುಗಳು, ನಿಬಂಧನೆಗಳು ಮತ್ತು ಹಾಗೂ ಇನ್ನು ಮುಂದೆ ಘನತ್ಯಾಜ್ಯ ನಿರ್ವಹಣೆ ಕಾರ್ಯಕ್ಕೆ ಸಂಬಂಧಿಸಿದಂತೆ ಪಾಲಿಕೆಯು ಆಗಿಂದಾಗ್ಗೆ ಕಛೇರಿ ಆದೇಶ/ಸುತ್ತೋಲೆಯಲ್ಲಿ ನೀಡುವ ಎಲ್ಲಾ ಸಲಹೆ/ಸೂಚನೆಗಳಿಗೆ ಹಾಗೂ ಘನ ನ್ಯಾಯಾಲಯವು ನೀಡಬಹುದಾದ ಆದೇಶಗಳಿಗೆ ಒಳಪಟ್ಟಿರುತ್ತದೆ.

14/12/12

ಕಾರ್ಯಪಾಲಕ ಅಭಿಯಂತರರು
ದಾಸರಹಳ್ಳಿ ವಿಭಾಗ, ದಾಸರಹಳ್ಳಿ ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ರವರಿಗೆ,

ಸಿ.ಎನ್.ಗಣೇಶ
#15/2, 4 ನೇ ಅಡ್ಡರಸ್ತೆ,
ಓಬಳೇಶ್ ಕಾಲೋನಿ, ಜೆ.ಜೆ.ಆರ್ ನಗರ
ಬೆಂಗಳೂರು.

ಪ್ರತಿಯನ್ನು:-

1. ಪೂಜ್ಯ ಮಹಾಪೌರರ ಆಪ್ತ ಕಾರ್ಯದರ್ಶಿಗಳಿಗೆ ಕಳುಹಿಸುತ್ತಾ ಪೂಜ್ಯ ಮಹಾಪೌರರ ಗಮನಕ್ಕೆ ತರಲು ಕೋರಲಾಗಿದೆ.
2. ಮಾನ್ಯ ಉಪ ಮಹಾಪೌರರ ಆಪ್ತ ಕಾರ್ಯದರ್ಶಿಗಳಿಗೆ ಕಳುಹಿಸುತ್ತಾ ಉಪ ಮಹಾಪೌರರ ಗಮನಕ್ಕೆ ತರಲು ಕೋರಲಾಗಿದೆ.
3. ಮಾನ್ಯ ಆಯುಕ್ತರರವರ ಅವಗಾಹನೆಗಾಗಿ ಸಲ್ಲಿಸಿದೆ.
4. ಮಾನ್ಯ ಅಧ್ಯಕ್ಷರು, ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ರವರ ಅವಗಾಹನೆಗೆ ತಗಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.
5. ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಅವಗಾಹನೆಗಾಗಿ ಸಲ್ಲಿಸಿದೆ.
6. ಮಾನ್ಯ ಅಪರ ಆಯುಕ್ತರು (ಆರೋಗ್ಯ ಮತ್ತು ಘನತ್ಯಾಜ್ಯ ನಿರ್ವಹಣೆ) ರವರ ಅವಗಾಹನೆಗಾಗಿ ಸಲ್ಲಿಸಿದೆ.
7. ಮಾನ್ಯ ಅಪರ/ಜಂಟಿ ಆಯುಕ್ತರು (ದಾಸರಹಳ್ಳಿ ವಲಯ) ರವರ ಅವಗಾಹನೆಗೆ ಸಲ್ಲಿಸಿದೆ
8. ಮುಖ್ಯ ಅಭಿಯಂತರರು(ದಾಸರಹಳ್ಳಿ ವಲಯ) ರವರ ಅವಗಾಹನೆಗಾಗಿ ಸಲ್ಲಿಸಿದೆ.
9. ಸಹಾಯಕ ನಿಯಂತ್ರಕರು(ಹಣಕಾಸು) ದಾಸರಹಳ್ಳಿ ವಲಯ ರವರ ಅವಗಾಹನೆಗೆ ಸಲ್ಲಿಸಿದೆ.
10. ಸಂಬಂಧಪಟ್ಟ ಅಧಿಕಾರಿಗಳಿಗೆ ಅನುಷ್ಠಾನಕ್ಕಾಗಿ/ಮಾಹಿತಿಗಾಗಿ ಕಳುಹಿಸಿದೆ.
11. ಕಛೇರಿ ಕಡತಕ್ಕೆ.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಾಸರಹಳ್ಳಿ ವಲಯ,

ಎಂ.ಇ.ಐ.ಬಡಾವಣೆ, ಬಾಗಲಗುಂಟೆ, ಹೆಸರಘಟ್ಟ ಮುಖ್ಯರಸ್ತೆ, ಬೆಂಗಳೂರು -560073.

ಸಂ:ಕಾ.ಅ/ದಾ.ವಿ/ಕಾ/ಪಿ.ಆರ್/ SWM-03/2014-15

ಕಾರ್ಯಪಾಲಕ ಅಭಿಯಂತರರ ಕಛೇರಿ,
ದಾಸರಹಳ್ಳಿ ವಿಭಾಗ
ದಿನಾಂಕ: 19/08/2014

**ಪರಿಷ್ಕೃತ ಕಾರ್ಯಾದೇಶ ಪತ್ರ**

ವಿಷಯ:- ದಾಸರಹಳ್ಳಿ ವಲಯ ವ್ಯಾಪ್ತಿಯ ಪ್ಯಾಕೇಜ್ ಡಿ-04 ರ ಘನತ್ಯಾಜ್ಯ ನಿರ್ವಹಣೆ ಹಾಗು ವಿಲೇವಾರಿ ಕಾರ್ಯ ನಿರ್ವಹಿಸಲು ದಿನಾಂಕ:01/04/2013 ರಿಂದ ಅನ್ವಯವಾಗುವಂತೆ ಪರಿಷ್ಕೃತ ಕಾರ್ಯಾದೇಶ ಪತ್ರ ನೀಡುವ ಬಗ್ಗೆ.

ಉಲ್ಲೇಖ:-
1. ಘನತ್ಯಾಜ್ಯ ನಿರ್ವಹಣೆ ಹಾಗು ವಿಲೇವಾರಿ ಕಾಮಗಾರಿಗೆ ಈ ಕಛೇರಿಯವತಿಯಿಂದ ಗುತ್ತಿಗೆದಾರರಾದ ಶ್ರೀ.ಗಣೇಶ್.ಸಿ.ಎನ್ ರವರೊಂದಿಗೆ ಮಾಡಿಕೊಂಡಿರುವ ಒಡಂಬಡಿಕೆ ಪತ್ರ ಸಂಖ್ಯೆ:BBMP/EE/DD/SWM/AGG-03/2012-13.
2. ಈ ಕಛೇರಿಯವತಿಯಿಂದ ನೀಡಿದ ಕಾರ್ಯಾದೇಶ ಪತ್ರ ಸಂಖ್ಯೆ: ಕಾ.ಪಾ.ಅ/ದಾ.ವಿ/ಕಾ/ಪಿ.ಆರ್/ SWM-03/2012-13, ದಿನಾಂಕ:14/12/2012.
3. ಮಾನ್ಯ ಆಯುಕ್ತರು ರವರ ಕಛೇರಿ ಆದೇಶ ಸಂಖ್ಯೆ:ಆ/ಪಿಆರ್/ಜಿ/8132/13-14, ದಿ:08/01/2014.
4. ಮಾನ್ಯ ಆಯುಕ್ತರು ರವರ ಅನುಮೋದನೆ ಸಂಖ್ಯೆ:ಪಿಎಸ್ಆರ್/ಜಿ/2321/14-15, ದಿನಾಂಕ:23/06/2014.

********

ಮೇಲ್ಕಂಡ ವಿಷಯ ಹಾಗು ಉಲ್ಲೇಖ ಪತ್ರಗಳಿಗೆ ಸಂಬಂಧಿಸಿದಂತೆ, ಶ್ರೀ.ಗಣೇಶ್.ಸಿ.ಎನ್ ರವರಿಗೆ ದಾಸರಹಳ್ಳಿ ವಲಯದ ಹೆಗ್ಗನಹಳ್ಳಿ ಉಪವಿಭಾಗದ ಪ್ಯಾಕೇಜ್ ಡಿ-04ರ (ವಾರ್ಡ್ ಸಂಖ್ಯೆ:70 ಹಾಗು 71) ಘನತ್ಯಾಜ್ಯ ನಿರ್ವಹಣೆ ಹಾಗು ವಿಲೇವಾರಿ ಕಾಮಗಾರಿಯನ್ನು ನಿರ್ವಹಿಸಲು ಉಲ್ಲೇಖ (1) ರಂತೆ ಒಡಂಬಡಿಕೆ ಮಾಡಿಕೊಂಡು ಉಲ್ಲೇಖ (2) ರಂತೆ ಕಾರ್ಯಾದೇಶ ಪತ್ರ ನೀಡಲಾಗಿರುತ್ತದೆ.

ಉಲ್ಲೇಖ (1) ರಂತೆ ಈ ಕಛೇರಿಯವತಿಯಿಂದ ಗುತ್ತಿಗೆದಾರರಾದ ಶ್ರೀ.ಗಣೇಶ್.ಸಿ.ಎನ್ ರವರೊಂದಿಗೆ ಮಾಡಿಕೊಂಡ ಒಡಂಬಡಿಕೆ ಪತ್ರದ ಆರ್ಟಿಕಲ್ "6" ರ ಕ್ರಮ ಸಂಖ್ಯೆ: "ಡಿ" ರಲ್ಲಿ *"ಗುತ್ತಿಗೆದಾರರು ಅವರ ಕಾರ್ಮಿಕರಿಗೆ ಸರ್ಕಾರದ ಆದೇಶ ಸಂಖ್ಯೆ:KE/152/LWA/2008, ದಿನಾಂಕ:21/02/2011 ರನ್ವಯ ವೇತನ ನೀಡುವುದು ಹಾಗು ಕಾರ್ಮಿಕ ಇಲಾಖೆಯು ಭವಿಷ್ಯದಲ್ಲಿ ಕಾರ್ಮಿಕರ ವೇತನವನ್ನು ಹೆಚ್ಚಿಸಿದಲ್ಲಿ ಸದರಿ ವೇತನದ ವ್ಯತ್ಯಾಸವನ್ನು ಪಾಲಿಕೆಯವತಿಯಿಂದ ಭರಿಸುವುದು"* ಎಂದು ಒಡಂಬಡಿಕೆ ಮಾಡಿಕೊಳ್ಳಲಾಗಿರುತ್ತದೆ.

ಕಾರ್ಮಿಕ ಇಲಾಖೆಯು ದಿನಾಂಕ:01/04/2013 ರಿಂದ ದಿನಾಂಕ:31/03/2014 ರವರೆಗೆ ಪ್ರತಿ ಮಾಹೆಗೆ ಪ್ರತಿ ಕಾರ್ಮಿಕರಿಗೆ ರೂ:541/-ಗಳ ತುಟ್ಟಿ ಭತ್ಯೆಯನ್ನು ಪ್ರಕಟಿಸಿದ್ದು, ಉಲ್ಲೇಖ (3) ರ ಮಾನ್ಯ ಆಯುಕ್ತರವರ ಕಛೇರಿ ಆದೇಶದಂತೆ ಪ್ಯಾಕೇಜ್ ಡಿ-04 ರಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ 248 ಜನ ಕಾರ್ಮಿಕರಿಗೆ ತುಟ್ಟಿ ಭತ್ಯೆಯ ಜೊತೆಗೆ ಶೇ.18.36 ರಷ್ಟು ಗುತ್ತಿಗೆದಾರರ ಇಎಸ್ಐ ಹಾಗು ಪಿಎಫ್ ವಂತಿಕೆ ಸೇರಿಸಿ ಒಟ್ಟು ರೂ:1,58,802/-ಗಳನ್ನು ಪಾವತಿಸುವ ಕುರಿತಂತೆ ಉಲ್ಲೇಖ (4)ರಲ್ಲಿ ಮಾನ್ಯ ಆಯುಕ್ತರವರ ಅನುಮೋದನೆಯನ್ನು ಪಡೆಯಲಾಗಿರುತ್ತದೆ.

ಉಲ್ಲೇಖ (2) ರಂತೆ ಪ್ರತಿ ಮಾಹೆಯ ಘನತ್ಯಾಜ್ಯ ನಿರ್ವಹಣೆ ಹಾಗು ವಿಲೇವಾರಿ ಕಾಮಗಾರಿಯ ಪ್ಯಾಕೇಜ್ ಡಿ-04 ರ ಗುತ್ತಿಗೆ ಮೊತ್ತವು ರೂ:27,68,022/-ಗಳಾಗಿದ್ದು, ಉಲ್ಲೇಖ (4) ರಂತೆ ದಿ:01/04/2013 ರಿಂದ ಅನ್ವಯವಾಗುವಂತೆ ಸದರಿ ಮೊತ್ತಕ್ಕೆ ರೂ:1,58,802/-ಗಳನ್ನು ಸೇರಿಸಿ ಒಟ್ಟು ಮೊತ್ತ ರೂ:29,26,824/- (ಇಪ್ಪತ್ತೊಂಬತ್ತು ಲಕ್ಷದ ಇಪ್ಪತ್ತಾರು ಸಾವಿರದ ಎಂಟು ನೂರ ಇಪ್ಪತ್ತ್ನಾಲ್ಕು ರೂಗಳು ಮಾತ್ರ) ಗಳಿಗೆ ದಿನಾಂಕ:01/04/2013 ರಿಂದ ಜಾರಿಗೆ ಬರುವಂತೆ ಮೂಲ ಕರಾರಿನ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಈ ಪರಿಷ್ಕೃತ ಕಾರ್ಯಾದೇಶ ಪತ್ರ ನೀಡಲಾಗಿದೆ.

ಕಾರ್ಯಪಾಲಕ ಅಭಿಯಂತರರು,
ದಾಸರಹಳ್ಳಿ ವಿಭಾಗ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ರವರಿಗೆ,

ಶ್ರೀ.ಗಣೇಶ್.ಸಿ.ಎನ್
# 15/2, 4ನೇ ಅಡ್ಡ ರಸ್ತೆ,
ಓಬಳೇಶ್ ಕಾಲೋನಿ,
ಜೆ.ಜೆ.ಆರ್ ನಗರ
ಬೆಂಗಳೂರು.

ಪ್ರತಿಯನ್ನು:

1. ಮಾನ್ಯ ಆಯುಕ್ತರು ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
2. ಮಾನ್ಯ ವಿಶೇಷ ಆಯುಕ್ತರು (ಘನತ್ಯಾಜ್ಯ) ರ ಮಾಹಿತಿಗಾಗಿ ಸಲ್ಲಿಸಿದೆ.
3. ಮಾನ್ಯ ಜಂಟಿ ಆಯುಕ್ತರು (ಆ & ಘತ್ಯಾನಿ) ರವರ ಮಾಹಿತಿಗಾಗಿ ಸಲ್ಲಿಸಿದೆ.
4. ಮಾನ್ಯ ಅಪರ ಆಯುಕ್ತರು, ದಾಸರಹಳ್ಳಿ ವಲಯ ರವರ ಮಾಹಿತಿಗಾಗಿ ಸಲ್ಲಿಸಿದೆ.
5. ಮಾನ್ಯ ಮುಖ್ಯ ಅಭಿಯಂತರರು, ದಾಸರಹಳ್ಳಿ ವಲಯ ರವರ ಮಾಹಿತಿಗಾಗಿ ಸಲ್ಲಿಸಿದೆ.
6. ಅಧೀಕ್ಷಕ ಅಭಿಯಂತರರು, ದಾಸರಹಳ್ಳಿ ವಲಯರವರ ಮಾಹಿತಿಗಾಗಿ ಸಲ್ಲಿಸಿದೆ.
7. ಸಹಾಯಕ ನಿಯಂತ್ರಕರು (ಹಣಕಾಸು) ರವರ ಮಾಹಿತಿಗಾಗಿ ಸಲ್ಲಿಸಿದೆ.
8. ಕಛೇರಿ ಕಡತಕ್ಕೆ.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಾಸರಹಳ್ಳಿ ವಲಯ,

ಎಂ.ಇ.ಐ.ಬಡಾವಣೆ, ಬಾಗಲಗುಂಟೆ, ಹೆಸರಘಟ್ಟ ಮುಖ್ಯರಸ್ತೆ, ಬೆಂಗಳೂರು –560073.

ಸಂ:ಕಾ.ಅ/ದಾ.ವಿ/ಕಾ/ಪಿ.ಆರ್/SWM-03/2014–15

ಕಾರ್ಯಪಾಲಕ ಅಭಿಯಂತರರ ಕಛೇರಿ,
ದಾಸರಹಳ್ಳಿ ವಿಭಾಗ
ದಿನಾಂಕ: 16/10/2014

**ಪರಿಷ್ಕೃತ ಕಾರ್ಯಾದೇಶ ಪತ್ರ**

**ವಿಷಯ:–** ದಾಸರಹಳ್ಳಿ ವಲಯ ವ್ಯಾಪ್ತಿಯ ಪ್ಯಾಕೇಜ್ ಡಿ–04 ರ ಘನತ್ಯಾಜ್ಯ ನಿರ್ವಹಣೆ ಹಾಗು ವಿಲೇವಾರಿ ಕಾರ್ಯ ನಿರ್ವಹಿಸಲು ದಿನಾಂಕ:01/04/2014 ರಿಂದ ಅನ್ವಯವಾಗುವಂತೆ ಪರಿಷ್ಕೃತ ಕಾರ್ಯಾದೇಶ ಪತ್ರ ನೀಡುವ ಬಗ್ಗೆ.

**ಉಲ್ಲೇಖ:–**
1. ಘನತ್ಯಾಜ್ಯ ನಿರ್ವಹಣೆ ಹಾಗು ವಿಲೇವಾರಿ ಕಾಮಗಾರಿಗೆ ಈ ಕಛೇರಿಯವತಿಯಿಂದ ಗುತ್ತಿಗೆದಾರರಾದ ಶ್ರೀ.ಗಣೇಶ್.ಸಿ.ಎನ್ ರವರೊಂದಿಗೆ ಮಾಡಿಕೊಂಡಿರುವ ಒಡಂಬಡಿಕೆ ಪತ್ರ ಸಂಖ್ಯೆ:BBMP/EE/DD/SWM/AGG-03/2012-13.
2. ಈ ಕಛೇರಿಯವತಿಯಿಂದ ನೀಡಿದ ಕಾರ್ಯಾದೇಶ ಪತ್ರ ಸಂಖ್ಯೆ: ಕಾ.ಪಾ.ಅ/ದಾ.ವಿ/ಕಾ/ಪಿ.ಆರ್/ SWM-03/2012–13, ದಿನಾಂಕ:14/12/2012.
3. ಈ ಕಛೇರಿಯವತಿಯಿಂದ ನೀಡಲಾದ ಪರಿಷ್ಕೃತ ಕಾರ್ಯಾದೇಶ ಪತ್ರ ಸಂಖ್ಯೆ: ಕಾ.ಪಾ.ಅ/ದಾ.ವಿ/ಕಾ/ಪಿ.ಆರ್/SWM-03/2014–15, ದಿನಾಂಕ:19/08/2014.
4. ಮಾನ್ಯ ಆಯುಕ್ತರು ರವರ ಕಛೇರಿ ಆದೇಶ ಸಂಖ್ಯೆ:ಆ/ಪಿಎಸ್/ಎಫ್–36/14–15, ದಿ:03/06/2014.
5. ಮಾನ್ಯ ಆಯುಕ್ತರು ರವರ ಕಛೇರಿ ಆದೇಶ ಸಂಖ್ಯೆ:ಆ/ಪಿಆರ್/ಜಿ/3971/14–15, ದಿನಾಂಕ:18/08/2014.

********

ಮೇಲ್ಕಂಡ ವಿಷಯ ಹಾಗು ಉಲ್ಲೇಖ ಪತ್ರಗಳಿಗೆ ಸಂಬಂಧಿಸಿದಂತೆ, ಶ್ರೀ.ಗಣೇಶ್.ಸಿ.ಎನ್ ರವರಿಗೆ ದಾಸರಹಳ್ಳಿ ವಲಯದ ಹೆಗ್ಗನಹಳ್ಳಿ ಉಪವಿಭಾಗದ ಪ್ಯಾಕೇಜ್ ಡಿ–04ರ (ವಾರ್ಡ್ ಸಂಖ್ಯೆ:70 ಹಾಗು 71) ಘನತ್ಯಾಜ್ಯ ನಿರ್ವಹಣೆ ಹಾಗು ವಿಲೇವಾರಿ ಕಾಮಗಾರಿಯನ್ನು ನಿರ್ವಹಿಸಲು ಉಲ್ಲೇಖ (1) ರಂತೆ ಒಡಂಬಡಿಕೆ ಮಾಡಿಕೊಂಡು ಉಲ್ಲೇಖ (2) ರಂತೆ ಕಾರ್ಯಾದೇಶ ಪತ್ರ ನೀಡಲಾಗಿರುತ್ತದೆ.

ಉಲ್ಲೇಖ (1) ರಂತೆ ಈ ಕಛೇರಿಯವತಿಯಿಂದ ಗುತ್ತಿಗೆದಾರರಾದ ಶ್ರೀ.ಗಣೇಶ್.ಸಿ.ಎನ್ ರವರೊಂದಿಗೆ ಮಾಡಿಕೊಂಡ ಒಡಂಬಡಿಕೆ ಪತ್ರದ ಆರ್ಟಿಕಲ್ "6" ರ ಕ್ರಮ ಸಂಖ್ಯೆ: "ಡಿ" ರಲ್ಲಿ *"ಗುತ್ತಿಗೆದಾರರು ಅವರ ಕಾರ್ಮಿಕರಿಗೆ ಸರ್ಕಾರದ ಆದೇಶ ಸಂಖ್ಯೆ:KE/152/LWA/2008, ದಿನಾಂಕ:21/02/2011 ರನ್ವಯ ವೇತನ ನೀಡುವುದು ಹಾಗು ಕಾರ್ಮಿಕ ಇಲಾಖೆಯು ಭವಿಷ್ಯದಲ್ಲಿ ಕಾರ್ಮಿಕರ ವೇತನವನ್ನು ಹೆಚ್ಚಿಸಿದಲ್ಲಿ ಸದರಿ ವೇತನದ ವ್ಯತ್ಯಾಸವನ್ನು ಪಾಲಿಕೆಯವತಿಯಿಂದ ಭರಿಸುವುದು"* ಎಂದು ಒಡಂಬಡಿಕೆ ಮಾಡಿಕೊಳ್ಳಲಾಗಿರುತ್ತದೆ.

ಕಾರ್ಮಿಕ ಇಲಾಖೆಯು ದಿನಾಂಕ:01/04/2013 ರಿಂದ ದಿನಾಂಕ:31/03/2014 ರವರೆಗೆ ಪ್ರತಿ ಮಾಹೆಗೆ ಪ್ರತಿ ಕಾರ್ಮಿಕರಿಗೆ ರೂ:541/–ಗಳ ತುಟ್ಟಿ ಭತ್ಯೆಯನ್ನು ಪ್ರಕಟಿಸಿದ್ದು, ಮಾನ್ಯ ಆಯುಕ್ತರವರ ಅನುಮೋದನೆ ಪಡೆದು ಉಲ್ಲೇಖ(3)ರಂತೆ ಈ ಕಛೇರಿಯವತಿಯಿಂದ ಪ್ಯಾಕೇಜ್ ಮೊತ್ತ ರೂ:27,68,022/–ಗಳಿಂದ ರೂ:29,26,824/–(ಇಪ್ಪತ್ತೊಂಬತ್ತು ಲಕ್ಷದ ಇಪ್ಪತ್ತಾರು ಸಾವಿರದ ಎಂಟು ನೂರ ಇಪ್ಪತ್ನಾಲ್ಕು ರೂಗಳು

ಮಾತ್ರ) ಗಳಿಗೆ ಹೆಚ್ಚಿಸಿ ದಿನಾಂಕ:01/04/2013 ರಿಂದ ಅನ್ವಯವಾಗುವಂತೆ ಪರಿಷ್ಕೃತ ಕಾರ್ಯಾದೇಶ ಪತ್ರ ನೀಡಲಾಗಿರುತ್ತದೆ.

ಕಾರ್ಮಿಕ ಇಲಾಖೆಯು ದಿನಾಂಕ:01/04/2014 ರಿಂದ ಪ್ರತಿ ಮಾಹೆಗೆ ಪ್ರತಿ ಕಾರ್ಮಿಕರಿಗೆ ರೂ:846/-ಗಳ ತುಟ್ಟಿಭತ್ಯೆಯನ್ನು ಪ್ರಕಟಿಸಿದ್ದು, ಉಲ್ಲೇಖ (4) & (5)ರ ಮಾನ್ಯ ಆಯುಕ್ತರವರ ಕಛೇರಿ ಆದೇಶದನ್ವಯ ಪ್ಯಾಕೇಜ್ ಡಿ-04 ರಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ 248 ಜನ ಕಾರ್ಮಿಕರಿಗೆ ತುಟ್ಟಿ ಭತ್ಯೆಯ ಜೊತೆಗೆ ಶೇ.18.36 ರಷ್ಟು ಗುತ್ತಿಗೆದಾರರ ಇಎಸ್ಐ ಹಾಗು ಪಿಎಫ್ ವಂತಿಕೆ ಸೇರಿಸಿ ಪ್ಯಾಕೇಜ್ ಮೊತ್ತ ರೂ:29,26,824/-ಗಳಿಗೆ ರೂ:2,48,329/-ಗಳ ತುಟ್ಟಿಭತ್ಯೆಯನ್ನು ಸೇರಿಸಿ *ರೂ:31,75,153/-ಗಳಿಗೆ (ಮೂವತ್ತೊಂದು ಲಕ್ಷದ ಎಪ್ಪತ್ತೈದು ಸಾವಿರದ ನೂರ ಐವತ್ಮೂರು ರೂಗಳು* **ಮಾತ್ರ)** *ದಿನಾಂಕ:01/04/2014ರಿಂದ ಅನ್ವಯವಾಗುವಂತೆ ಹೆಚ್ಚಿಸಿ ಮೂಲ ಕರಾರಿನ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಹಾಗು ಗುತ್ತಿಗೆದಾರರು ಅವರ ಕಾರ್ಮಿಕರಿಗೆ ಹೆಚ್ಚಿಸಿರುವ ಈ ತುಟ್ಟಿಭತ್ಯೆ ಹಾಗು ಹೆಚ್ಚುವರಿಯಾದ ತುಟ್ಟಿಭತ್ಯೆಗೆ ಇಎಸ್ಐ ಹಾಗು ಪಿಎಫ್‌ನ್ನು ಕಡ್ಡಾಯವಾಗಿ ಪಾವತಿಸುವ ಷರತ್ತಿಗೊಳಪಟ್ಟು* ಈ ಪರಿಷ್ಕೃತ ಕಾರ್ಯಾದೇಶ ಪತ್ರ ನೀಡಲಾಗಿದೆ.

ಕಾರ್ಯಪಾಲಕ ಅಭಿಯಂತರರು,
ದಾಸರಹಳ್ಳಿ ವಿಭಾಗ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ರವರಿಗೆ,

ಶ್ರೀ.ಗಣೇಶ್.ಸಿ.ಎನ್
# 15/2, 4ನೇ ಅಡ್ಡ ರಸ್ತೆ,
ಓಬಳೇಶ್ ಕಾಲೋನಿ,ಸ
ಜೆ.ಜೆ.ಆರ್ ನಗರ
ಬೆಂಗಳೂರು.

ಪ್ರತಿಯನ್ನು:

1. ಮಾನ್ಯ ಆಯುಕ್ತರು ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
2. ಮಾನ್ಯ ವಿಶೇಷ ಆಯುಕ್ತರು (ಘನತ್ಯಾಜ್ಯ) ರ ಮಾಹಿತಿಗಾಗಿ ಸಲ್ಲಿಸಿದೆ.
3. ಮಾನ್ಯ ಜಂಟಿ ಆಯುಕ್ತರು (ಆ & ಘತ್ಯಾನಿ) ರವರ ಮಾಹಿತಿಗಾಗಿ ಸಲ್ಲಿಸಿದೆ.
4. ಮಾನ್ಯ ಅಪರ ಆಯುಕ್ತರು, ದಾಸರಹಳ್ಳಿ ವಲಯ ರವರ ಮಾಹಿತಿಗಾಗಿ ಸಲ್ಲಿಸಿದೆ.
5. ಮಾನ್ಯ ಮುಖ್ಯ ಅಭಿಯಂತರರು, ದಾಸರಹಳ್ಳಿ ವಲಯ ರವರ ಮಾಹಿತಿಗಾಗಿ ಸಲ್ಲಿಸಿದೆ.
6. ಅಧೀಕ್ಷಕ ಅಭಿಯಂತರರು, ದಾಸರಹಳ್ಳಿ ವಲಯರವರ ಮಾಹಿತಿಗಾಗಿ ಸಲ್ಲಿಸಿದೆ.
7. ಸಹಾಯಕ ನಿಯಂತ್ರಕರು (ಹಣಕಾಸು) ರವರ ಮಾಹಿತಿಗಾಗಿ ಸಲ್ಲಿಸಿದೆ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೆಗ್ಗನಹಳ್ಳಿ ಉಪವಿಭಾಗರವರ ಮಾಹಿತಿಗಾಗಿ ಹಾಗು ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
9. ಕಛೇರಿ ಕಡತಕ್ಕೆ.

Received